ಆ) ವಿಷಯ : **ಶ್ರೀ ಗುರುಪಾದಪ್ಪ ನಾಗಮಾರಪಲ್ಲಿರವರ ಮಗನಾದ ಶ್ರೀ ವಿಜಯಕುಮಾರ್ ರವರ ಮೇಲೆ ನಡೆದ ಹಲ್ಲೆ ಹಾಗೂ ಅವರು ತೀರಿಕೊಂಡಿರುವ ಬಗ್ಗೆ.**

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗುರುಮಿಠಕಲ್) : ಮಾನ್ಯ ಅಧ್ಯಕ್ಷರೇ, ನಾನು ಒಂದು ದು:ಖದ ಸಂಗತಿಯನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ತಾವು ಈ ಬಗ್ಗೆ immediately act ಮಾಡಬೇಕು. ನಮ್ಮ ಗುರುಪಾದಪ್ಪ ನಾಗಮಾರಪಲ್ಲಿಯವರ ಮಗನಾದ ವಿಜಯಕುಮಾರ್‌ರವರ ಮೇಲೆ attack ಮಾಡಿದ್ದು, he has been shot dead. ಕೂಡಲೇ, ಯಾರು ಆ ಕಲ್ಪ್ರಿಟ್ಸ್ ಎಂದು ಕಂಡುಹಿಡಿದು ಅರೆಸ್ಟ್ ಮಾಡಿ ಸಿಚುಯೇಚನ್ನನ್ನು ಕಂಟ್ರೋಲ್‌ಗೆ ತರಲು ಕ್ರಮ ಕೈಗೊಳ್ಳಬೇಕು.

ಶ್ರೀ ಎಂ.ಪಿ. ಪ್ರಕಾಶ್ (ಗೃಹ, ಕಾನೂನು, ಸಂಸದೀಯ ವ್ಯವಹಾರಗಳ ಸಚಿವರು) : ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಏನು ಘಟನೆಯನ್ನು ಪ್ರಸ್ತಾಪ ಮಾಡಿದ್ದಾರೆ ಅದರ ಮಾಹಿತಿ ನನಗೆ ಈಗ ಸಿಕ್ಕಿದೆ. ಅದರ ಸತ್ಯಾಸತ್ಯತೆ ಎಷ್ಟು ಎನ್ನುವುದು ನನಗೆ ಗೊತ್ತಿಲ್ಲ. ಬಂದ ಮಾಹಿತಿಯನ್ನು ಮಾತ್ರ ಹೇಳುತ್ತಿದ್ದೇನೆ. ವಿಜಯ್‌ಕುಮಾರ್‌ರವರು ಯಾವುದೋ ಒಂದು ಜಾಗವನ್ನು ಅಥವಾ ನಿವೇಶನವನ್ನು ಜವಾಬ್ದಾರಿಯಿಂದ ಕೊಡಿಸಬೇಕು ಎಂದು ಹೋದಂಥ ಸಂದರ್ಭದಲ್ಲಿ ಅವರು ರಿವಾಲ್ವಾರ್‌ನಿಂದ ಷೂಟ್ ಮಾಡಿದರು, ಅದಕ್ಕೆ ಪ್ರತಿವಾದಿಗಳಾಗಿದ್ದಂಥವರು ಇವರಿಗೆ ತಲವಾರ್‌ನಿಂದ ಹೊಡೆದರು, ಇಬ್ಬರೂ ಕೂಡ ಬಹಳ ಕ್ರಿಟಿಕಲ್ ಕಂಡೀಷನ್‌ನಲ್ಲಿದ್ದಾರೆ ಎನ್ನುವ ಮಾಹಿತಿ ಬಂದಿದೆ.

ಶ್ರೀ ವಾಟಾಳ್ ನಾಗರಾಜ್: ಇಲ್ಲ, ಅವರು ತೀರಿಕೊಂಡರು ಎನ್ನುವ ಮಾಹಿತಿ ಬಂದಿದೆ.

ಶ್ರೀ ಎಂ.ಪಿ.ಪ್ರಕಾಶ್: ಆ ಮಾಹಿತಿ ಈಗ ಬಂದಿರಬೇಕು. ನಾನು ಸದನದ ಒಳಗಡೆ ಬರುವುದಕ್ಕಿಂತ ಪೂರ್ವದಲ್ಲಿ ಸಿಕ್ಕಿದ ಮಾಹಿತಿಯಿದು. ಅವರಿಗೆ ತಲವಾರ್‌ನಿಂದ ಹೊಡೆದಿದ್ದಾರೆ. ಕೂಡಲೇ ಆ ಬಗ್ಗೆ ಕ್ರಮ ಕೈಗೊಳ್ಳುವಂತೆ ನಾವು ಎಸ್.ಪಿ. ಯವರ ಜೊತೆಗೆ ಮಾತನಾಡಿದ್ದೇವೆ. ಐ.ಜಿ.ಯವರಿಗೂ ಕೂಡ ತಾವು ಗುಲ್ಬರ್ಗಾದಿಂದ ಅಲ್ಲಿಗೆ ಹೋಗಬೇಕು ಎನ್ನುವ ವಿಷಯವನ್ನೂ ತಿಳಿಸಿದ್ದೇವೆ. ಇದರ ಬಗ್ಗೆಯೂ ಖಂಡಿತವಾಗಿಯೂ ಕ್ರಮ ತೆಗೆದುಕೊಳ್ಳುತ್ತೇವೆ. ಇದೊಂದು ನಿಜವಾಗಿಯೂ ವಿಷಾದಕರವಾದ

ಮತ್ತು ದುರ್ದೈವದ ಘಟನೆ. ಅದರ ಸತ್ಯಾಸತ್ಯತೆ ಬಗ್ಗೆ ಸದನಕ್ಕೂ ಕೂಡ suo-moto statement ಅನ್ನು ಸೋಮವಾರದ ದಿವಸ ನಾನು ಮಾಡುತ್ತೇನೆ. ಇದೊಂದು ಗುರುತರವಾದಂಥ ಸಮಸ್ಯೆ. ಎರಡನೆಯದು, ಮಾನ್ಯ ವಾಟಾಳ್ ನಾಗರಾಜ್‌ರವರು ಪ್ರಸ್ತಾಪ ಮಾಡಿದಂತೆ, ಈ ದಿವಸ 6 ಗಂಟೆಗೆ ಕರೆದಿರುವ ಸಭೆಯ ಮುಖ್ಯವಾದ ಉದ್ದೇಶವೇನೆಂದರೆ, Cauvery Tribunal ವಿಷಯದಲ್ಲಿ ತೀರ್ಮಾನ ಬಂದಾಗ ಆ ತೀರ್ಮಾನದ ಸಂದರ್ಭದಲ್ಲಾಗುವ ಪರಿಣಾಮಗಳೇನು? ಅಥವಾ ಆ ತೀರ್ಮಾನ ನಮ್ಮ ಪರವಾಗಿರುತ್ತದೆಯೋ? ವಿರೋಧವಾಗಿರುತ್ತದೆಯೋ? ಈ ವಿಚಾರಗಳು ಯಾರಿಗೂ ಗೊತ್ತಿಲ್ಲ. ಆದರೂ ಕೂಡ, ಅನುಚಿತವಾದಂಥ ಘಟನೆಗಳು ಎಲ್ಲ ಕಡೆ ಆಗಬಾರದು. ಕನಿಷ್ಠ ಪಕ್ಷ ಮಂಡ್ಯ, ಮೈಸೂರು, ಚಾಮರಾಜನಗರ ಜಿಲ್ಲೆಗಳಲ್ಲಿ ನಡೆಯಬಾರದು ಮತ್ತು ಇಂಥ ವಿಚಾರಗಳಲ್ಲಿ ಭಾವನಾತ್ಮಕವಾದಂಥ ಸಂಬಂಧಗಳಿರುವುದರಿಂದ ಅವುಗಳ ಬಗ್ಗೆ ಏನೆಲ್ಲಾ ಕಾನೂನಿನ ಕ್ರಮಗಳನ್ನು ಕೈಗೊಳ್ಳಬೇಕಾಗುತ್ತದೆ ಮತ್ತು ವಿವಿಧ ರಾಜಕೀಯ ಪಕ್ಷಗಳು ಇಂಥ ಸಂದರ್ಭದಲ್ಲಿ ಏನೆಲ್ಲಾ ನಾವು ಕ್ರಮಗಳನ್ನು ಕೈಗೊಳ್ಳಬೇಕೆಂಬುದರ ಬಗ್ಗೆ ಮಾತನಾಡಬೇಕೆನ್ನುವ ಕಾರಣಕ್ಕಾಗಿಯೇ ಸಾಯಂಕಾಲ 6 ಗಂಟೆಗೆ ಸಭೆ ಕರೆದಿದ್ದಾರೆ. ಮಾನ್ಯ ಖರ್ಗೆಯವರು ಹೇಳಿದಂತೆ, ಈ ಬರಗಾಲದ ಸಮೀಕ್ಷೆ ವಿಷಯದಲ್ಲಿ ಸದನ ಸಮಿತಿ ಮಾಡತಕ್ಕಂಥದ್ದು ಆಗಬಹುದು ಅಥವಾ ಏಕ ಸದಸ್ಯ ಸಮಿತಿಯು ಸಲಹೆ ಕೊಡುವಂಥದ್ದು ಆಗಬಹುದು. ನಮಗೆಲ್ಲ ಹಿಂದಿನ ಉದಾಹರಣೆಗಳು ಕೂಡ ಇವೆ. ಅವರು ನೀಡಿರುವುದು ಬಹಳ ಉತ್ತಮ ಸಲಹೆಯಾಗಿರುವ ಹಿನ್ನೆಲೆಯಲ್ಲಿ ನಾನು, ಕಂದಾಯ ಮಂತ್ರಿಗಳು, ಮುಖ್ಯಮಂತ್ರಿಗಳು, ಉಪ ಮುಖ್ಯಮಂತ್ರಿಗಳ ಜೊತೆಗೆ ಮಾತನಾಡಿದಮೇಲೆ ಅವರು ಉತ್ತರ ಕೊಡುವ ಸಂದರ್ಭದಲ್ಲಿ ಅದಕ್ಕೆ ನಾವು ಸಕಾರಾತ್ಮಕವಾಗಿ ಪ್ರತಿಕ್ರಿಯಿಸುತ್ತೇವೆ. ಏಕೆಂದರೆ, ಇದರಲ್ಲಿ ಪಕ್ಷದ ಪ್ರಶ್ನೆ ಇಲ್ಲ. ಬರಗಾಲದ ಪ್ರಶ್ನೆ ಎಂದಾಗ, ನಮ್ಮಲ್ಲೇನಾದರೂ ತಪ್ಪುಗಳಾಗಿದ್ದರೆ ದೋಷಗಳನ್ನು ತಿದ್ದಿಕೊಳ್ಳಬೇಕಾಗುತ್ತದೆ. ಯಾವುದಾದರೂ ರಾಜಕೀಯ ಹಿನ್ನೆಲೆ ಇರತಕ್ಕಂಥ ಪ್ರಶ್ನೆಯಾದಾಗ ನಮ್ಮದೇ ಪ್ರತಿಷ್ಠೆಯನ್ನಿಟ್ಟುಕೊಳ್ಳಬಹುದಾಗಿತ್ತು. ಆದರೆ, ಆ ಪ್ರಶ್ನೆ ಇಲ್ಲಿ ಉದ್ಭವವಾಗುವುದಿಲ್ಲ. ಜನರ ಸಮಸ್ಯೆಯನ್ನು ಬಗೆಹರಿಸಲಿಕ್ಕೆ ನಾವೆಷ್ಟು ಜವಾಬ್ದಾರರೋ ನೀವೂ ಸಹ ಅಷ್ಟೇ ಜವಾಬ್ದಾರರಾಗಿರುವುದರಿಂದ

ಉತ್ತಮವಾದಂಥ ಸಲಹೆ ಕೊಟ್ಟಿದ್ದೀರಿ. ನಾವು, ಕಂದಾಯ ಮಂತ್ರಿಗಳು, ಎಲ್ಲರೂ ಕಲೆತು ಮಾತನಾಡಿದ ಮೇಲೆ ಸೋಮವಾರ ಅವರು ಉತ್ತರ ಕೊಡುವಾಗ ಅದರ ಬಗ್ಗೆಯೂ ಸಹ ಪರಿಗಣಿಸುತ್ತೇವೆ ಎನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತಾ, ಸದನದಲ್ಲಿಮುಖ್ಯಮಂತ್ರಿಗಳು ಇಲ್ಲದಿರುವುದಕ್ಕೆ ಕಾರಣ ಇವತ್ತು ಅವರು ಬೇರೆ ಬೇರೆ ಕಾರ್ಯಕ್ರಮ ಮತ್ತು ಸಭೆಯನ್ನು ಇಟ್ಟುಕೊಂಡಿದ್ದರು. ತಮ್ಮ ಭಾವನೆಯನ್ನು ಹಾಗೂ ಸಭೆಯ ಭಾವನೆಯನ್ನು ನಾನು ಮುಖ್ಯಮಂತ್ರಿಗಳಿಗೆ ಖಂಡಿತವಾಗಿಯೂ ಮುಟ್ಟಿಸುತ್ತೇನೆ. ಈ ದೋಷ ಆಗಲಾರದಂತೆ ನೋಡಿಕೊಳ್ಳುತ್ತೇವೆ. ಇವತ್ತು ಸಂಜೆ 6 ಗಂಟೆಗೆ ನಿಗದಿಯಾದಂತೆ meeting ಇದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ: ಒಪ್ಪಿಕೊಂಡಿರುವುದಕ್ಕೆ ತಮಗೆ ಧನ್ಯವಾದಗಳು. ಅವರಿಬ್ಬರನ್ನು ಬಿಟ್ಟು Empower Committee assert ಮಾಡಿ.

ಶ್ರೀ ಎಂ.ಪಿ. ಪ್ರಕಾಶ್: ನೀವು ಹೇಳಬೇಕಾದದ್ದನ್ನು ಹೇಳುತ್ತೀರಿ. ಇಲ್ಲವೆಂದಲ್ಲ.

ಶ್ರೀ ವಾಟಾಳ್ ನಾಗರಾಜ್: ಈ ಮಧ್ಯೆ ನಾವು ಹೇಳುವುದೇನೆಂದರೆ, ಇವತ್ತು ಸದನವನ್ನು ಮುಂದಕ್ಕೆ ಹಾಕುತ್ತಿದ್ದೀರಿ. ಎಲ್ಲರೂ ಊರಿಗೆ ಹೋಗುವುದರಿಂದ ಇವತ್ತು ಸಂಜೆ 6 ಗಂಟೆಗೆ ಇರತಕ್ಕಂಥ ಸಭೆಯನ್ನು ಮುಂದಕ್ಕೆ ಹಾಕಿ. ಸೋಮವಾರ ಸಭೆ ಕರೆಯೋಣ. 5ನೇ ತಾರೀಖು ತಾನೆ ತೀರ್ಮ ಬರುವುದು. ಆದ್ದರಿಂದ, ಸೋಮವಾರದ ದಿವಸ ಬೆಳಗ್ಗೆ ಸಭೆ ಕರೆಯಿರಿ, ಆ ದಿನ ಬೆಳಗ್ಗೆ ಚರ್ಚೆ ಮಾಡೋಣ. ಇವತ್ತು ಆ ಸಭೆ ನಡೆಸುವುದು ಬೇಕಾಗಿಲ್ಲವೆಂದು ನನಗೆ ಅನಿಸುತ್ತದೆ. ತೀರ್ಮ ಬಂದ ತಕ್ಷಣ ಮಾತನಾಡೋಣ.

ಡಾ: ಹೆಚ್.ಸಿ. ಮಹಾದೇವಪ್ಪ: Cauvery basin ನ MLA ಗಳಿಗೆ ಯಾವತ್ತೂ ಏನೂ ತಿಳಿಸುವುದೇ ಇಲ್ಲ. ಈ ತರಹ ಏಕೆ ಮಾಡುತ್ತೀರಿ? ಆ ಭಾಗದಿಂದ ಬಂದಂಥ ಶಾಸಕರಿದ್ದಾರೆ.

(ಗೊಂದಲ)

ಶ್ರೀ ಸಿದ್ಧರಾಮಯ್ಯ: ಕಾವೇರಿ ಬೇಸಿನ್‌ನಿಂದ ನಾನೂ ಸಹ ಆರಿಸಿ ಬಂದಿದ್ದೇನೆ. ಡಾ:ಹೆಚ್.ಸಿ.ಮಹಾದೇವಪ್ಪ, ವೆಂಕಟೇಶ್‌ರವರು, ಮಹದೇವ್‌ರವರು ಹೀಗೆ ಬೇರೆ ಬೇರೆ MLA ಗಳು ಬಂದಿದ್ದಾರೆ. ನಮಗೆಲ್ಲ

ಆ ಸಭೆಗೆ ಏಕೆ ಕರೆದಿಲ್ಲ ? ಆ ಬಗ್ಗೆ ನಮಗೇನೂ ಸಂಬಂಧವಿಲ್ಲವೇ? ಸರ್ಕಾರದ ಕಡೆಯಿಂದ ಸಭೆಯನ್ನು ಕರೆದಿರುವ ಉದ್ದೇಶವೇನು? ತೀರ್ಪು ಏನಾಗಬಹುದೋ ಗೊತ್ತಿಲ್ಲ, ನಮಗೆ ನ್ಯಾಯ ಸಿಕ್ಕಬಹುದೋ, ಸಿಕ್ಕದಿರಬಹುದೋ, ನ್ಯಾಯ ಸಿಕ್ಕಿದರೆ ಸಂತೋಷ. ಸಿಕ್ಕಬೇಕೆಂಬುದು ನಮ್ಮೆಲ್ಲರ ಆಸೆ. ಒಂದು ವೇಳೆ ಏನಾದರೂ ಅಚಾತುರ್ಯ ಆದರೆ ಕಾನೂನು ಬಗ್ಗೆ ಚರ್ಚೆ ಮಾಡಲಿಕ್ಕೆ, ಅಲ್ಲಿ ಏನು ಮಾಡಬೇಕೆಂಬುದರ ಬಗ್ಗೆ, ಸರ್ಕಾರ ಏನೇನು ಕ್ರಮಗಳನ್ನು ತೆಗೆದುಕೊಳ್ಳಬೇಕು ಎನ್ನುವುದರ ಬಗ್ಗೆ ಎಲ್ಲ ಪಕ್ಷದವರನ್ನು ಕರೆದಿದ್ದೀರಿ. ಹಾಗಾದರೆ Cauvery basinರವರನ್ನು ಕರೆಯುವ ಹಾಗಿಲ್ಲವೇ? ಉದ್ದೇಶಪೂರ್ವಕವಾಗಿ ಕರೆಯಲೇಬಾರದೆಂಬ ಭಾವನೆ ಏನಾದರೂ ಸರ್ಕಾರಕ್ಕೆ ಇದೆಯೇ?

ಶ್ರೀ ಎಂ.ಪಿ.ಪ್ರಕಾಶ್: ವಿರೋಧ ಪಕ್ಷದವರನ್ನು ಕರೆಯಬೇಕೆಂದು ಹೇಳಿ ಮಾಡಿದ್ದಾರೆ.

ಶ್ರೀ ಸಿದ್ಧರಾಮಯ್ಯ: ಈಗ ನೀವು ಅಲ್ಲಿಗೆ ಯಾರ್ಯಾರನ್ನು ಕರೆದಿದ್ದೀರಿ ಎಂಬ ಪಟ್ಟಿ ಇದೆಯಲ್ಲವೇ?

ಶ್ರೀ ಎಂ.ಪಿ.ಪ್ರಕಾಶ್: ನನ್ನ ಹತ್ತಿರ ಆ ಪಟ್ಟಿ ಇಲ್ಲ, ತರಿಸುತ್ತೇನೆ.

ಶ್ರೀ ಸಿದ್ಧರಾಮಯ್ಯ: ಹಿಂದೆ ಸಹ ಒಂದು ಸಲ ಈ ರೀತಿ ಸಭೆ ಕರೆದಿದ್ದಿರಿ. ಆಗ ಸಹ ಈ basin ರವರನ್ನು ಯಾರನ್ನೂ ಸಹ ಕರೆದಿರಲಿಲ್ಲ.

ಶ್ರೀ ಕೆ. ಶ್ರೀನಿವಸಗೌಡ : ಮಾನ್ಯ ಉಪಾಧ್ಯಕ್ಷರೆ, ಮೈಸೂರು, ಮಂಡ್ಯ, ಚಾಮರಾಜನಗರ ಜಿಲ್ಲೆಗಳ ಎಲ್ಲ MLA ಗಳು ಸಹ ಈ ಸಭೆಗೆ ಬರಬೇಕಾಗುತ್ತದೆ.

ಶ್ರೀ ವಾಟಾಳ್ ನಾಗರಾಜ್ : ನಾನು ತಮಗೆ ಹೇಳುವುದೇನೆಂದರೆ, ತಾವು ಸಭೆಯನ್ನು ಮುಂದಕ್ಕೆ ಹಾಕಿ. ತೀರ್ಪು ಬಂದ ಮೇಲೆ ಕರೆಯಿರಿ. ತೀರ್ಪು ಬರುವ ಮುಂಚೆ ಚರ್ಚೆಮಾಡುವುದಕ್ಕಿಂತ ತೀರ್ಪು ಬಂದ ಮೇಲೆ ಸೋಮವಾರ ಬೆಳಗ್ಗೆ ಸಭೆ ಕರೆಯುವುದು ಒಳ್ಳೆಯದು.

ಶ್ರೀ ಕೆ. ಶ್ರೀನಿವಾಸಗೌಡ: ಮಾನ್ಯ ಮುಖ್ಯಮಂತ್ರಿಗಳು ಇವತ್ತು ಸಂಜೆ 6 ಗಂಟೆಗೆ ಸರ್ವ ಪಕ್ಷ ಸಭೆ ಏನು ಕರೆದಿದ್ದಾರೆ ಅದನ್ನು ಮುಂದೂಡಿ 5ನೇ ತಾರೀಖು ತೀರ್ಪು ಬಂದ ಮೇಲೆ ಚರ್ಚೆ ಮಾಡಿದರೆ ನಾವೇನು ಮಾತನಾಡಬಹುದು, ಏನು ತೀರ್ಮಾನ ಮಾಡಬಹುದು ಎಂದು ನಮ್ಮ

Floor Leaders ಹೇಳಬಹುದು ಅಥವಾ Assembly ಯಲ್ಲಿಯೂ ಚರ್ಚೆಯಾಗಬಹುದು.

ಶ್ರೀ ಎಂ.ಪಿ. ಪ್ರಕಾಶ್: 5ನೇ ತಾರೀಖಿನ ದಿವಸ ಸಭೆ ಕರೆದು ಮಾತನಾಡುವುದು ಒಂದು ಪ್ರಶ್ನೆಯಲ್ಲ. ಮಾನ್ಯ ಮುಖ್ಯಮಂತ್ರಿಗಳು ಸಭೆ ಕರೆದಿರುವ ಉದ್ದೇಶವೇನೆಂದರೆ, Tribunal ನಿಂದ ಯಾವ ತರಹವಾದ ತೀರ್ಪು, ತೀರ್ಮಾನ ಬರುತ್ತದೆಯೋ ಗೊತ್ತಿಲ್ಲ. ತೀರ್ಮಾನ ನಮಗೆ ವಿರುದ್ಧವಾಗಿ ಬರಬಹುದು ಅಥವಾ ಪರವಾಗಿ ಬರಬಹುದು. ಪರವಾಗಿ ಬರಲೆಂದು ನಾವೆಲ್ಲ ಪ್ರಾರ್ಥನೆ ಮಾಡುತ್ತೇವೆ. ನಾವೆಲ್ಲ ಪರವಾಗಿ ತೀರ್ಪು ಬರುತ್ತದೆಂದು ಆಸೆ ಇಟ್ಟುಕೊಂಡಿದ್ದೇವೆ. ಆಗಲಿ. ತೀರ್ಮಾನ ನಮ್ಮ ಪರವಾಗಿ ಬರಲೆಂದು ನಾವು ಯೋಚನೆ ಮಾಡುತ್ತೇವೆ. ಆ ಸಂದರ್ಭದಲ್ಲಿ ಅನುಚಿತವಾದಂಥ ಘಟನೆಗಳಾಗಲಾರದಂತೆ ಕಾನೂನು ಸಂರಕ್ಷಣೆ ಮಾಡುವ ವಿಚಾರದಲ್ಲಿ ಮತ್ತು ಮುಂದಿನ ನಿಲುವುಗಳೇನಿರಬೇಕೆನ್ನುವುದರ ಬಗ್ಗೆ ನಾವೆಲ್ಲ ಸ್ಥೂಲವಾಗಿ ಚರ್ಚೆ ಮಾಡಬೇಕೆನ್ನುವ ಉದ್ದೇಶದಿಂದ ಸಭೆ ಕರೆದಿದ್ದಾರೆ. ಈಗ ತಾವು ಸೋಮವಾರದ ದಿವಸ ಸಭೆ ಕರೆಯಿರಿ ಎಂದು ಹೇಳುತ್ತಿದ್ದೀರಿ. ಸೋಮವಾರ 5ನೇ ತಾರೀಖು ಆಗಿದ್ದು, ಆ ದಿನವೇ ತೀರ್ಪು ಬರುತ್ತದೆ. ಹಾಗಾಗಿ, ಕಾನೂನು ಸುವ್ಯವಸ್ಥೆ ಸಲುವಾಗಿ ಇವತ್ತೇ ಸಭೆ ನಡೆಸಬೇಕಾಗುತ್ತದೆ.

ಶ್ರೀ ಕೆ. ಶ್ರೀನಿವಾಸಗೌಡ : ಹಾಗಾದರೆ, ಇವತ್ತೇ meeting ಮಾಡಬೇಕಾಗುತ್ತದೆ. ಹಿಂದೆ ಬಂಗಾರಪ್ಪನವರು ಮುಖ್ಯಮಂತ್ರಿಗಳಾಗಿದ್ದಂಥ ಕಾಲದಲ್ಲಿ ಆದಂಥ ಘಟನೆಗಳನ್ನು ನೆನೆಸಿಕೊಂಡರೆ, ಸಭೆ ನಡೆಸುವುದಿದ್ದರೆ ಇವತ್ತೇ ಸಭೆ ನಡೆಸಿ. ಅದು ಬಹಳ ಉಪಯೋಗವಾಗುತ್ತದೆ.

ಶ್ರೀ ಎಂ.ಪಿ. ಪ್ರಕಾಶ್: 5ನೇ ತಾರೀಖು ಸಭೆ ಕರೆಯುವುದರಲ್ಲಿ ಯಾವ ಅರ್ಥವೂ ಇಲ್ಲ.

ಶ್ರೀ ವಾಟಾಳ್ ನಾಗರಾಜ್: ಆಯಿತು, ಸಭೆ ನಡೆಸಿ. ನಿಮಗೇನಾದರೂ ನಮ್ಮ ರಾಜ್ಯಕ್ಕೆ ಅನ್ಯಾಯವಾಗುತ್ತದೆ ಎಂದು ಏನಾದರೂ ಸೂಚನೆ ಸಿಕ್ಕಿದೆಯೇ?

ಶ್ರೀ ಎಂ.ಪಿ. ಪ್ರಕಾಶ್: ನಮಗೆ ಇರುವ ಸೂಚನೆ ಎಂದರೆ, ನಾವು ಗೆಲ್ಲುತ್ತೇವೆಂದೇ ಇದೆ. ಏಕೆಂದರೆ, ನ್ಯಾಯ ನಮ್ಮ ಪರವಿರುವುದರಿಂದ ಅವರು ನ್ಯಾಯವಾದ ತೀರ್ಮಾನ ಕೊಡುತ್ತಾರೆಂದು ನಾವು ಭಾವಿಸಿಕೊಂಡಿದ್ದೇವೆ.

ಶ್ರೀ ವಾಟಾಳ್ ನಾಗರಾಜ್: ತೀರ್ಪು ವಿರುದ್ಧವಾದಾಗ ರಾಜ್ಯವೇನು ತೀರ್ಮಾನಕ್ಕೆ ಬರಬೇಕೆಂದು ನಾವು ಯೋಚನೆ ಮಾಡಬೇಕಲ್ಲವೇ? ಅದೂ ಬಹಳ ಪ್ರಾಮುಖ್ಯವಾಗಿದೆ.

ಶ್ರೀ ಎಂ.ಪಿ. ಪ್ರಕಾಶ್: ಮಾನ್ಯ ಸಿದ್ದರಾಮಯ್ಯನವರು ಹೇಳಿದ ವಿಚಾರಕ್ಕೆ ಹೇಳುವುದಾದರೆ, Cauvery basin ಗೆ ಸಂಬಂಧಪಟ್ಟವರೆಲ್ಲರನ್ನೂ ಸಭೆಗೆ ಕರೆಯಬೇಕಾದದ್ದು ಸಾಧ್ಯವಾದದು. ಆದರೂ ಕೂಡ ಇಲ್ಲಿಯವರೆಗೆ ಬಂದಿರತಕ್ಕಂಥ ಸಂಪ್ರದಾಯವೆಂದರೆ ಆಯಾ ಪಕ್ಷದ ಮುಖಂಡರುಗಳನ್ನು ಸರ್ವ ಪಕ್ಷದ ಸಭೆಗೆ ಕರೆಯಲಾಗಿದೆ. CPI ನವರು ಈಗ ಯಾವ ಪ್ರತಿನಿಧಿಗಳೂ ಇಲ್ಲ. ಆದರೂ ಅವರ ಅಧ್ಯಕ್ಷರನ್ನು ಸಭೆಗೆ ಕರೆದಿದ್ದಾರೆ. ಯಾರ್ಯಾರನ್ನು ಸಭೆಗೆ ಕರೆದಿದ್ದಾರೆನ್ನುವ ಪಟ್ಟಿ ನನ್ನ ಹತ್ತಿರ ಇಲ್ಲ. ಆ ಪಟ್ಟಿ ಬಗ್ಗೆ ಅಧಿಕಾರಿಗಳ ಹತ್ತಿರ ಕೇಳಿದೆ, ಅವರ ಹತ್ತಿರವೂ ಇಲ್ಲ. ಆ ಪಟ್ಟಿಯನ್ನು ನಾನು ತರಿಸಿಕೊಂಡು, ಆಕಸ್ಮಾತ್ ಆಗಿ ಅದರಲ್ಲಿ ಇದ್ದರೆ ತಾವೆಲ್ಲರೂ ಕೂಡ ಅದರಲ್ಲಿ ಬರುತ್ತೀರಿ. ಸಭಾ ನಾಯಕರನ್ನು, ಪಕ್ಷದ ಮುಖಂಡರನ್ನು ಸಭೆಗೆ ಕರೆದಿದ್ದಾರೆ. ಮತ್ತೆ, ಬೇಕು ಎನ್ನುವುದಾಗಿದ್ದರೆ, ಮಾತನಾಡಿ ಈ ಬದಲಾವಣೆಗಳನ್ನು ಮಾಡಿ ತಮಗೆ ತಿಳಿಸುತ್ತೇನೆ.

ಉಪಾಧ್ಯಕ್ಷರು: ಈಗ ಸಭೆಯು ಮುಕ್ತಾಯವಾಗಿ ಸೋಮವಾರ ಬೆಳಗ್ಗೆ 11–00 ಗಂಟೆಗೆ ಸೇರುವುದು.

(ಸದನವು ಮಧ್ಯಾಹ್ನ 2 ಗಂಟೆ 18 ನಿಮಿಷಕ್ಕೆ ಮುಕ್ತಾಯಗೊಂಡು ಪುನ: ದಿನಾಂಕ 5ನೇ ಫೆಬ್ರವರಿ 2007ರ ಸೋಮವಾರದಂದು ಬೆಳಗ್ಗೆ 11–00 ಗಂಟೆಗೆ ಸೇರಲು ನಿಶ್ಚಯಿಸಿತು)

ಅನುಬಂಧ – I

2(68) ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ) : ಮಾನ್ಯ ಯೋಜನೆ, ಸಣ್ಣ ಉಳಿತಾಯ, ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ ರೇಷ್ಮೆ ಸಚಿವರು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ;

ಅ) ಕಳೆದ ಮೂರು ವರ್ಷಗಳಲ್ಲಿ ಲಾಟರಿಯಿಂದ ಸರ್ಕಾರಕ್ಕೆ ಬಂದ ಆದಾಯ ಎಷ್ಟು ; (ವರ್ಷವಾರು, ಪೇಪರ್ ಲಾಟರಿ, ಆನ್‌ಲೈನ್ ಲಾಟರಿ ಇವುಗಳ ಬಗ್ಗೆ ಪ್ರತ್ಯೇಕವಾಗಿ ವಿವರ ನೀಡುವುದು) ;

ಆ) ಲಾಟರಿಯನ್ನು ಸಂಪೂರ್ಣವಾಗಿ ನಿಷೇಧ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ ;